

ಸಂಪಾದಕೀಯ

# ಬೆಳಕ ಬೀರುವ ಹಾದಿ

## ಭಾಗ ೩

ಹಿಂದಿನ ಎರಡು ಸಂಚಿಕೆಗಳಲ್ಲಿ ಧರ್ಮಗಳ ಉಗಮ ಹಾಗೂ ಬೆಳವಣಿಗೆ, ಅವುಗಳಿಗೆ ಮೂಲವಾದ ಅಲೌಕಿಕ ದಿವ್ಯಾನುಭವಗಳು — ಈ ವಿಷಯಗಳ ಬಗ್ಗೆ ಚರ್ಚಿಸಲಾಯಿತು. ಆಧ್ಯಾತ್ಮಿಕ ಅನುಭೂತಿ ಮಹಾಪುರುಷರ ಪಾಲಿಗಷ್ಟೇ ಸೀಮಿತವಾಗದೆ, ಅದು ಜನಸಾಮಾನ್ಯರೂ ಸೇರಿದಂತೆ ಇಡೀ ಮನುಕುಲವನ್ನೇ ಮುನ್ನಡೆಸಬಲ್ಲ ಬೆಳಕಿನ ಮಾರ್ಗವಾಗಿ ಹೇಗೆ ವಿಸ್ತರಿಸಿತು ಎಂಬ ಅಂಶ ಕೂಡ ಅತ್ಯಂತ ಕುತೂಹಲಕಾರಿಯಾದ ಸಂಗತಿಯಾಗಿದೆ.

### ಅಭಿವ್ಯಕ್ತಿಯ ತುಡಿತ

ದಿವ್ಯಾನುಭವವನ್ನು ಪಡೆದು ಭಗವದ್ದರ್ಶನವನ್ನು ಹೊಂದಿದ ಮಹಾತ್ಮರಲ್ಲೆಲ್ಲ ಎರಡು ಬಗೆಯ ಪ್ರವೃತ್ತಿಯನ್ನು ನಾವು ಗಮನಿಸಬಹುದು: ೧) ತಮ್ಮ ಅನುಭವ, ಅದರ ಪ್ರಭಾವವನ್ನು ಅಡಗಿಸುವ, ಇತರರಿಂದ ಗುಪ್ತವಾಗಿಡುವ ಪ್ರಯತ್ನ. ೨) ಇತರರಿಗೂ ತನ್ನ ಅನುಭವಗಳನ್ನು ಹೇಳುವ, ಆ ಮೂಲಕ ಅವರನ್ನು ದಿವ್ಯ ಮಾರ್ಗದಲ್ಲಿ ಮುನ್ನಡೆಸಲು ಪ್ರೇರೇಪಿಸುವ ಪ್ರಯತ್ನ. ಇವುಗಳಲ್ಲಿ ಮೊದಲನೆಯದು ಪ್ರಧಾನವಾಗಿ ಸ್ವ-ರಕ್ಷಣೆಗಾಗಿ. ಯೋಗಿಗಳು, ಸಂತರು ಗುಪ್ತವಾಗಿ ಇರುತ್ತಿದ್ದರೆ, ಅದರರ್ಥ ತಮ್ಮ ಅನುಭವ, ಜ್ಞಾನಗಳನ್ನು ಇತರರಿಗೆ ತಿಳಿಸಬಾರದೆಂದಲ್ಲ; ಆದರೆ ಅಜ್ಞಾನಿಗಳು ಹಾಗೂ ದಿವ್ಯಾನುಭವವೆಂದರೆ ಏನೆಂದೇ ಅರ್ಥವಾಗದವರು ಸಂತರು ಹಾಗೂ ಯೋಗಿಗಳನ್ನು ಲೇವಡಿ ಮಾಡುತ್ತಾರೆ, ಅವರಿಗೆ ತೊಂದರೆ ಕೊಡುತ್ತಾರೆ. ಈ ಕಾರಣದಿಂದ ಅವರಿಂದ ದೂರವಿರಬಯಸುತ್ತಾರೆ. ಇಂಥ ಗುಪ್ತ ಯೋಗಿಗಳು ಎಲ್ಲ ಕಾಲದಲ್ಲೂ ಇರುತ್ತಿದ್ದರು, ಈಗಲೂ ಇರಬಹುದು. ಆದರೆ ಇನ್ನೊಂದು ಬಗೆಯ ಸಂತರಿದ್ದಾರೆ — ಅವರು ಯಾವ ರೀತಿಯ ಭಯಕ್ಕೂ ಒಳಗಾಗದೆ, ಸ್ವಚ್ಛಂದವಾಗಿ ತಮ್ಮ ದಿವ್ಯಾನಂದದಲ್ಲೇ ತೇಲಾಡುವವರು. ಅವರು ಎರಡನೆಯ ಪ್ರವೃತ್ತಿಯನ್ನು ಹೊಂದಿರುವವರು: ಪಂಡಿತ, ಪಾಮರರೆನ್ನದೆ ಎಲ್ಲರಿಗೂ ತಮ್ಮ ದಿವ್ಯ ದರ್ಶನವನ್ನು ಕುರಿತು ಹೇಳುವವರು; ಅವರಲ್ಲಿ ಯೋಗ್ಯರು ಅಥವಾ ಅರ್ಹರು ಕಂಡುಬಂದರೆ, ತಮ್ಮ ಆಧ್ಯಾತ್ಮಿಕ ಅನುಭವಗಳನ್ನೆಲ್ಲ ತಿಳಿಸಿ ಹೇಳುವವರು. ಮುಂದೆ ಈ ಅನುಭವಗಳೇ ದಾಖಲಿಸಲ್ಪಡುತ್ತವೆ; ಕಾಲಾನುಕ್ರಮದಲ್ಲಿ ಅವೇ ಶ್ರೇಷ್ಠ ಆಧ್ಯಾತ್ಮಿಕ ಗ್ರಂಥಗಳಾಗುತ್ತವೆ. ವೇದ, ಉಪನಿಷತ್ತು, ಗೀತೆ, ಬೈಬಲ್, ಧಮ್ಮಪದಗಳೆಲ್ಲ ಹೀಗೆಯೇ ದಾಖಲಿಸಲ್ಪಟ್ಟ ದಿವ್ಯಗ್ರಂಥಗಳಾಗಿವೆ. ಸಾಧನೆಯ ಮಾರ್ಗಗಳೆಲ್ಲ ಇವುಗಳನ್ನು ಆಧಾರವಾಗಿಟ್ಟುಕೊಂಡೇ ಹೊರಡುತ್ತವೆ. ಮುಂದೆ ಇವೇ ಪ್ರಧಾನ ಧರ್ಮಗಳಾಗಿ ರೂಪುಗೊಳ್ಳುತ್ತವೆ.

ಒಬ್ಬೊಬ್ಬ ಸಂತನ ಅನುಭವಗಳನ್ನೂ ಅವರ ಶಿಷ್ಯಂದಿರು ಇದೇ ರೀತಿ ಬರೆದಿಡುವುದು ಜಗತ್ತಿನ ಎಲ್ಲೆಡೆ ಕಂಡುಬಂದಿದೆ. **'ಶ್ರೀರಾಮಕೃಷ್ಣ ವಚನವೇದ'**ವು ಈ ಬಗೆಯ ಗ್ರಂಥಗಳಲ್ಲಿ ಕಿರೀಟಪ್ರಾಯದ್ದಾಗಿದೆ. ಮಹಾಪುರುಷನೊಬ್ಬನ ಅಭಿವ್ಯಕ್ತಿಯ ತುಡಿತ ಎಷ್ಟು ಪ್ರಬಲವಾದದ್ದು ಎಂಬುದನ್ನು ಈ ಕೃತಿಯ ಉದ್ದಕ್ಕೂ ಕಾಣಬಹುದಾಗಿದೆ. ಭಕ್ತಿಮಾರ್ಗದ ಸಾಧು-ಸಂತರ ಹಾಡುಗಳಲ್ಲೂ, ಶಿವಶರಣರ ವಚನಗಳಲ್ಲೂ, 'ಶ್ರೀ ರಮಣ ಮಹರ್ಷಿಗಳೊಡನೆ ಮಾತುಕತೆ' ಮುಂತಾದ ಕೃತಿಗಳಲ್ಲೂ ಈ ಪ್ರವೃತ್ತಿ ದಟ್ಟವಾಗಿರುವುದನ್ನು ಕಾಣಬಹುದು. ಇಂಥ ಪ್ರವೃತ್ತಿಯನ್ನು ವೈಯಕ್ತಿಕ ತುಡಿತವಾಗಿ ಕಾಣದೆ, ದಿವ್ಯತೆಯು ಸಕಲ ಮಾನವಕೋಟಿಯ ಹೃದಯಗಳಲ್ಲಿ ವ್ಯಾಪಕಗೊಳ್ಳಲು ಹವಣಿಸುತ್ತಿರುವ ದೈವೀಶಕ್ತಿಯ ದಿವ್ಯಪ್ರವೃತ್ತಿಯೆಂದೇ ಪರಿಗಣಿಸಬೇಕು. ಜಾತಿ, ಮತ, ಪಂಥ, ಲಿಂಗಭೇದ, ವರ್ಣಭೇದಗಳಿಲ್ಲದೆ ಈ ಶಕ್ತಿ ಎಲ್ಲೆಡೆ ಮುನ್ನುಗ್ಗುತ್ತಿದೆ. ಧರ್ಮವು ಕಟ್ಟುಪಾಡುಗಳ, ಮತಾಂಧತೆಯ ಸೀಮಿತ ಪಂಥಗಳ ನಡುವೆ ಸಿಲುಕಿ ಉಸಿರುಗಟ್ಟುವಂತೆ ಆದಾಗಲೆಲ್ಲ ಈ ಶಕ್ತಿಯೇ ಅಂತಹ ಎಲ್ಲ ಬಂಧಗಳನ್ನೂ ಕಡಿದು ಹಾಕುವುದು; ಅದು ಎಲ್ಲರೊಂದಿಗೆ ಮುನ್ನುಗ್ಗಿ, ವಿಶಾಲವಾರಿಧಿಯಲ್ಲಿ ಒಂದಾಗುವಂತೆ ಮಾಡುವುದು.

### ಹೃದಯದಿಂದ ಹೃದಯಕ್ಕೆ

ಧಾರ್ಮಿಕ ಗ್ರಂಥಗಳು ಆಧ್ಯಾತ್ಮಿಕ ಮಾರ್ಗಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ, ನಿಜ. ಆದರೆ ವಾಸ್ತವವಾಗಿ

ಆಧ್ಯಾತ್ಮಿಕತೆ ವ್ಯಾಪಕಗೊಳ್ಳುವುದು ಗ್ರಂಥಗಳಿಂದಲ್ಲ, ವ್ಯಕ್ತಿಯಿಂದ ವ್ಯಕ್ತಿಗೆ ದಾಟಿಸಲ್ಪಡುವ ಮೂಲಕ. ದಿವ್ಯಾನುಭವ, ಸಾಕ್ಷಾತ್ಕಾರ ಹೊಂದಿದ ವ್ಯಕ್ತಿಯ ಸುತ್ತ ಸಮಾನ ಆಧ್ಯಾತ್ಮಿಕ ಪ್ರವೃತ್ತಿಯನ್ನು ಹೊಂದಿದ ವ್ಯಕ್ತಿಗಳ ವಲಯವೊಂದು ರೂಪುಗೊಳ್ಳುತ್ತದೆ. ಆ ವಲಯವೇ ಅವನ ಪ್ರಥಮ ಶಿಷ್ಯವರ್ಗ. ತಮ್ಮ ಗುರುವಿನ ನೇರ ಶಿಷ್ಯರಾದ ಅವರು ಆ ಗುರುವಿನ ಅಸಾಧಾರಣ ಪ್ರಭಾವಲಯಕ್ಕೆ ಒಳಗಾಗಿ, ತಾವೂ ಆಧ್ಯಾತ್ಮಿಕವಾಗಿ ಮುಂದುವರಿಯುತ್ತಾರೆ. ತಮ್ಮ ಗುರುವಿನ ಆದರ್ಶ, ಉಪದೇಶಗಳನ್ನು ಎಲ್ಲೆಡೆ ಹರಡುವ ಉತ್ಸಾಹ ಅವರಲ್ಲಿ ಅಧಿಕವಾಗಿರುತ್ತದೆ. ಅವರೂ ತಮ್ಮ ಶಿಷ್ಯಂದಿರ ಮೂಲಕ ಈ ಆಧ್ಯಾತ್ಮಿಕ ಪರಂಪರೆ ಮುಂದುವರಿಯುವಂತೆ ಮಾಡುತ್ತಾರೆ. ಗುರು-ಶಿಷ್ಯ ಪರಂಪರೆಯ ಈ ತಲೆಮಾರು ಗಳಲ್ಲಿ ತಮ್ಮ ಆದಿಗುರುವಿನ ಆದರ್ಶ ಬದಲಾಗದೆ ಮುಂದುವರಿಯು ವಂತೆ ಮಾಡಲು ಧಾರ್ಮಿಕ ಗ್ರಂಥಗಳು ಸಹಾಯ ಮಾಡುತ್ತವೆ. ಆತನ ಉಪದೇಶಗಳು ಅಲ್ಲಿ ದಾಖಲಾಗಿರುವುದರಿಂದ, ನೇರ ಅವುಗಳಿಂದ ಸ್ಫೂರ್ತಿ ಪಡೆಯುವುದೂ ಸಾಧ್ಯವಾಗುತ್ತದೆ. ಆದರೆ ಗ್ರಂಥದ ಮೌಲಿಕತೆ ಹಾಗೂ ಶ್ರೇಷ್ಠತೆಗೆ ಶಕ್ತಿ ಬರುವುದು ಆ ಪರಂ ಪರೆಯ ಜೀವಂತ ಸಾಧು-ಸಂತರಿಂದ ಎಂಬುದು ಬಹಳ ಮುಖ್ಯವಾದ ಸಂಗತಿ. 'ಹಣತೆಯಿಂದ ಹಣತೆ ಹಚ್ಚಿದಂತೆ' — ಇದು ಇಂತಹ ಗುರು-ಶಿಷ್ಯ ಪರಂಪರೆಗೆ ನೀಡಿರುವ ಸುಂದರ ವಾದ ಉಪಮೆ. ಹೀಗೆ ಆಧ್ಯಾತ್ಮಿಕತೆ, ದಿವ್ಯತೆ ಜೀವಂತವಾಗಿಲ್ಲದ ಧರ್ಮಗಳು ಕ್ರಮೇಣ ಕ್ಷೀಣಿಸುತ್ತವೆ; ಪ್ರೀತಿ, ಸತ್ಯ, ತ್ಯಾಗ, ವೈರಾಗ್ಯ, ಶಾಂತಿ, ಸಾಮರಸ್ಯಗಳು ಮರೆಯಾಗಿ, ಕೇವಲ ಮತಾಂ ಧತೆ, ಅಜ್ಞಾನ, ದ್ವೇಷ, ಕ್ರೌರ್ಯಗಳು ಧರ್ಮದ ಹೆಸರಿನಲ್ಲಿ ಮೆರೆದಾಡುತ್ತವೆ. ಧರ್ಮದ ನಿಜವಾದ ತಿರುಳು ಸತ್ತು ಹೋಗು ತ್ತದೆ.

### ಭಾರತ: ದಿವ್ಯಮಾರ್ಗಗಳ ತವರೂರು

ಬಹುಶಃ ಪ್ರಪಂಚದ ಬೇರೆ ದೇಶದಲ್ಲೆಲ್ಲೂ ಕಂಡುಬರದಷ್ಟು ವ್ಯಾಪಕವಾದ, ಸಮಗ್ರವಾದ ಹಾಗೂ ಸಮೃದ್ಧವಾದ ಧಾರ್ಮಿಕ - ಆಧ್ಯಾತ್ಮಿಕ ಪ್ರಯೋಗಗಳು ಭಾರತದಲ್ಲಿ ನಡೆದಿವೆ. ಅನೇಕ ಸಹಸ್ರ ವರ್ಷಗಳ ಇತಿಹಾಸದಲ್ಲಿ ಅದೆಷ್ಟೋ ಆಧ್ಯಾತ್ಮಿಕ ಮಾರ್ಗ ಗಳು ಇಲ್ಲಿ ರೂಪುಗೊಂಡಿವೆ, ಎಷ್ಟೋ ಮಂದಿ ಆಧ್ಯಾತ್ಮಿಕ ಮಹಾ ವ್ಯಕ್ತಿಗಳು ಇಲ್ಲಿ ಉದಿಸಿ ಬಂದಿದ್ದಾರೆ. ಅದಕ್ಕನುಗುಣವಾಗಿ ಜಗ ತ್ತಿನ ಪ್ರಧಾನ ಧರ್ಮಗಳೆಲ್ಲ ಇಲ್ಲೇ ಹುಟ್ಟಿವೆ. ವೈದಿಕ, ಬೌದ್ಧ, ಜೈನ, ಸಿಖ್ ಮೊದಲಾದ ಪ್ರಮುಖ ಧರ್ಮಗಳೊಂದಿಗೆ, ಹಿಂದೂ ಧರ್ಮದಲ್ಲೇ ಶೈವ, ವೈಷ್ಣವ, ಶಾಕ್ತ, ಗಾಣಾಪತ್ಯ, ಸೌರ, ರಾಮಾ ಯತ ಮೊದಲಾದ ಮತಗಳೂ, ದ್ವೈತ, ಅದ್ವೈತ, ವಿಶಿಷ್ಟಾದ್ವೈತ ತತ್ತ್ವಗಳಿಗೆ ಅನುಗುಣವಾಗಿ ಅನೇಕ ಒಳಪಂಗಡಗಳೂ, ತಂತ್ರ, ಶ್ರೀವಿದ್ಯಾ ಮೊದಲಾದ ಉಪಾಸನಾಮಾರ್ಗಗಳೂ, ದಶನಾಮಿ ಮೊದಲಾದ ಸಂನ್ಯಾಸ ಪರಂಪರೆಗಳೂ ರೂಪುಗೊಂಡಿವೆ. ಈ ಎಲ್ಲ ವೈವಿಧ್ಯಗಳ ನಡುವೆ ಸಾಕಷ್ಟು ಕೊಡು-ಕೊಳ್ಳುವಿಕೆಗಳಾಗಿವೆ; ಬಿಕ್ಕಟ್ಟು-ಸಂಘರ್ಷಗಳೇನಿದ್ದರೂ ಆಯಾ ಮತಗಳ ನಿಷ್ಠೆಯನ್ನು ಅವಲಂಬಿಸಿವೆ. ಭಾರತದ ಧಾರ್ಮಿಕ ಪಂಗಡಗಳೆಂದೂ ಅಸ ಹನೆಯ, ಮತಾಂಧತೆಯ ಕುಲುಮೆಯಾಗಲಿಲ್ಲ. ಪ್ರತಿಯೊಬ್ಬ ನಿಗೂ ಪ್ರತಿಯೊಂದು ಪಂಥಕ್ಕೂ ತಮ್ಮದೇ ಆದ ಆಧ್ಯಾತ್ಮಿಕ ಮಾರ್ಗವನ್ನು ಅನುಸರಿಸುವ ಸ್ವಾತಂತ್ರ್ಯವನ್ನು ಇಲ್ಲಿ ನೀಡಲಾಗಿದೆ. ಧರ್ಮ ಇಲ್ಲಿ ನಿಂತ ನೀರಾಗಲಿಲ್ಲ; ಒಂದೇ ಪ್ರದೇಶದಲ್ಲಿ ಕೊಳೆ-ಕೊಚ್ಚೆ, ರೋಗಾಣುಗಳಿಂದ ತುಂಬಿದ ಭಯಾನಕ ಪ್ರದೇಶವಾಗ ಲಿಲ್ಲ. ಅನೇಕ ಸಂತರು, ಅವತಾರ ಪುರುಷರು ಇಲ್ಲಿ ಹಲವು ನದೀ ಪ್ರವಾಹಗಳಂತೆ ಬಂದರು. ಹಲವು ಉಪನದಿಗಳು, ಸಹಸ್ರಾರು ತೊರೆಗಳು ಅವುಗಳನ್ನು ಬಂದು ಸೇರಿದವು. ಎಲ್ಲವೂ ಒಂದೇ ಮಹಾಸಾಗರದತ್ತ ಸಾಗುವ ಒಂದು ದಿವ್ಯ ಗಮನವೆಂಬುದನ್ನು ಇಲ್ಲಿನ ಮಹಾತ್ಮರಾರೂ ಮರೆಯಲಿಲ್ಲ. ಇದೇ ಇಲ್ಲಿನ ಧಾರ್ಮಿಕ ವೈಶಾಲ್ಯಕ್ಕೆ, ವಿಶಾಲ ಹೃದಯಕ್ಕೆ ಕಾರಣವಾಯಿತು. ನಡುವೆ ಐತಿಹಾಸಿಕವಾಗಿ ಕೆಲವೊಂದು ಏರುಪೇರುಗಳಿದ್ದವು; ಸಾಮಾಜಿಕ, ಆರ್ಥಿಕ, ರಾಜಕೀಯ ತಲ್ಲಣಗಳಿಂದ ನಮ್ಮ ದೇಶ ಕುಗ್ಗಿ ಹೋಯಿತು. ಆದರೆ ಎಂದೂ ಇಲ್ಲಿನ ಧಾರ್ಮಿಕ, ಆಧ್ಯಾತ್ಮಿಕ ಪರಂಪರೆ ಬತ್ತಿಹೋಗಲಿಲ್ಲ. ಅದು ವಿಸ್ತರಿಸುತ್ತಲೇ ಹೋಯಿತು.

### ಸಾಕ್ಷಾತ್ಕಾರದ ಹಾದಿ

ವ್ಯಕ್ತಿಯೊಬ್ಬನು ಸಾಮಾನ್ಯರಂತೆ ಜನಿಸಿ, ಅದೇ ಕಣ್ಣು, ಕಿವಿ, ಮೂಗು, ಇಂದ್ರಿಯಗಳನ್ನು ಹೊತ್ತು, ಅದೇ ರೀತಿ ನಾನಾ ಬಯಕೆ ಗಳನ್ನು ಹೊತ್ತು ಬೆಳೆಯುತ್ತ, ಇದ್ದಕ್ಕಿದ್ದಂತೆ ಅದೆಲ್ಲಿಂದಲೋ ವೈರಾಗ್ಯದ ಗಾಳಿ ಬೀಸಿ ಬಂದಾಗ ತ್ಯಾಗಜೀವನವನ್ನರಸಿ ಹೋಗು ತ್ತಾನಲ್ಲ, ಅದೇಕೆ? ಎಲ್ಲ ಸರಿಯಾಗಿದೆ, ಎಲ್ಲರಂತೆ ಬದುಕುತ್ತಿದ್ದ ಒಬ್ಬ ವ್ಯಕ್ತಿ ಏನೋ ಒಂದು ಅಲ್ಪ ನೆಪದಿಂದ ಎಲ್ಲವನ್ನು ಬಿಟ್ಟು ದೂರಹೋಗಿ ಸಂನ್ಯಾಸಿಯಾದ, ಏಕೆ? ನಮ್ಮಲ್ಲಿ ಇಂಥ ಪ್ರಶ್ನೆ ಗಳು ಏಳುತ್ತವೆ; ನಮ್ಮ ನಡುವೆ ಇಂಥ ಘಟನೆಗಳು ಎಷ್ಟೋ ನಡೆಯುತ್ತವೆ. ವ್ಯಕ್ತಿಯೊಬ್ಬನ ಜೀವನ ಬದಲಾಗುವುದೂ ಅಷ್ಟೇ ಸಹಜವಾಗಿದೆ. ಎಲ್ಲರಂತೆ ಸಹಜವಾದ ಜೀವನ ನಡೆಸದೆ, ಆಧ್ಯಾ ತ್ಮಿಕ ಜೀವನದತ್ತ ತುಡಿಯುವ ವ್ಯಕ್ತಿಯನ್ನು ಸಮಾಜ ವಿಚಿತ್ರ ವೆಂಬಂತೆ ನೋಡುವುದು; ಆದರೆ ಅದೇ ಸಮಾಜ ಮುಂದೊಂದು ದಿನ ಅವನನ್ನು ದೇವರೆಂದೇ ಪೂಜಿಸುವುದು. ಇದಕ್ಕೆ ಕಾರಣ ವೊಂದೇ — ಅವನು ಹಿಡಿದಿರುವುದು ಸಾಮಾನ್ಯರ ಹಾದಿಯಲ್ಲ, ಸಾಕ್ಷಾತ್ಕಾರದ ಹಾದಿ.

ಆಧ್ಯಾತ್ಮಿಕ ಪ್ರೇರಣೆ ಯಾರಿಗೆ, ಯಾವಾಗ, ಯಾವ ರೂಪ ದಲ್ಲಿ ಬಂದುಬಿಡುವುದು ಎಂದು ಖಚಿತವಾಗಿ ಹೇಳಲಾಗದು. ಇದು ಇಂದು ನಿನ್ನೆಯ ಕಥೆಯಲ್ಲ; ನಮ್ಮ ಪ್ರಾಚೀನ ಇತಿಹಾಸವೆಲ್ಲ ಇಂತಹ ತ್ಯಾಗ, ವೈರಾಗ್ಯಗಳ ಕಥೆಗಳಿಂದ ತುಂಬಿದೆ. ತಂದೆ ವ್ಯಾಸ ರನ್ನೇ ಮೀರಿಸಿ ನಿರ್ಲಿಪ್ತತೆ, ವೈರಾಗ್ಯ, ಜ್ಞಾನಗಳನ್ನು ಹೊಂದಿದ ಶುಕಮುನಿಯಾಗಲಿ, ಭಗವಂತನ ನಾಮವನ್ನು ಕೇಳಿದಕೂಡಲೇ ತಪಸ್ಸು ಮಾಡುವ ತವಕ ಹುಟ್ಟುತ್ತಿದ್ದ ಧ್ರುವನಾಗಲಿ, ಹರಿನಾಮ ವಲ್ಲದೆ ಬೇರೇನನ್ನೂ ನಂಬದ ಬಾಲಕ ಪ್ರಹ್ಲಾದನಾಗಲಿ ಕೇವಲ ಪುರಾಣದಲ್ಲಿ ಬರುವ ಕಥಾಪಾತ್ರಗಳಾಗಿ ಉಳಿಯಲಿಲ್ಲ; ಪ್ರತಿ ಯೊಂದು ಕಾಲಘಟ್ಟದಲ್ಲೂ, ಒಂದೊಂದು ಪ್ರಾಂತದಲ್ಲೂ ಅದೇ ರೀತಿಯ ಮಹಾತ್ಮರು ಉದಿಸಿ ಬಂದರು. ಜನಮನದ ನರನಾಡಿ

ಗಳಲ್ಲಿ ಇಂಥ ಕಥೆಗಳ ದಿವ್ಯಪ್ರಭಾವ ಇಂದಿನವರೆಗೂ ಹರಿದು ಕೊಂಡು ಬಂದಿದೆ. ಇದರೊಂದಿಗೆ ಐತಿಹಾಸಿಕ ವ್ಯಕ್ತಿಗಳಾದ ಬುದ್ಧ, ಮಹಾವೀರ, ಶಂಕರ, ಮೀರಾಬಾಯಿ, ಚೈತನ್ಯರ ಅದ್ಭುತ ಜೀವನಗಳಿವೆ. ಇನ್ನೂ ಎಷ್ಟೆಷ್ಟೋ ಸಂತರ, ಭಕ್ತರ ಜೀವನಚರಿತ್ರೆ ಗಳು ನಮಗೆ ಕಲಿಸಿಕೊಡುವುದು ತ್ಯಾಗ, ವೈರಾಗ್ಯ, ಭಕ್ತಿ, ಪ್ರೇಮ ಗಳನ್ನು; ಎಲ್ಲ ಸಾಧನೆಗಳ ಧ್ಯೇಯವಾದ ಭಗವಂತನ ಅಸ್ತಿತ್ವ ವನ್ನು; ಕಣ್ಣಿಗೆ ಕಾಣುವ ಜಗತ್ತಿನ ಸುಖದುಃಖಗಳಾಚೆಗೆ ದೂರ ವ್ಯಾಪಿಸಿರುವ ಶಾಶ್ವತ ಆನಂದದ ನೆಲೆಯನ್ನು. ಹೀಗೆ ಒಂದು ವರ್ತುಲ ಇಲ್ಲಿ ಪೂರ್ಣವಾಗುತ್ತದೆ: ಮಹಾತ್ಮರ ದಿವ್ಯಾನುಭವ; ಅದರಿಂದ ಸಮಾಜದ ಮೇಲೆ ಪ್ರೇರಣೆ; ಸಾಮಾನ್ಯರಿಗೆ ಧರ್ಮ ಮಾರ್ಗ, ಉಪದೇಶ; ಅಂಥ ಸಮಾಜದಿಂದ ಮತ್ತೆ ಮಹಾತ್ಮರ, ಸಾಧು-ಸಂತರ ಆವಿರ್ಭಾವ.

ತೀರ ಪ್ರಾಚೀನ ಕಾಲದಿಂದಲೇ ಭಾರತದ ಮೇಲೆ ನಡೆದ ಪರಕೀಯರ ಆಕ್ರಮಣಗಳಾಗಲಿ, ರಾಜಕೀಯ, ಸಾಮಾಜಿಕ ಅಸಮತೋಲನಗಳಾಗಲಿ, ನಮ್ಮ ಮೇಲೆ ವ್ಯವಸ್ಥಿತವಾಗಿ ನಡೆದ ಸಾಂಸ್ಕೃತಿಕ ದಬ್ಬಾಳಿಕೆಯಾಗಲಿ ಈ ಆಧ್ಯಾತ್ಮಿಕ ಪ್ರವಾಹದ ಗತಿ ಯನ್ನು ತಡೆಯಲಾಗಲಿಲ್ಲ. ಮಹಾತ್ಮರು ಇಲ್ಲಿ ಉದಯಿಸಿ ಬಂದಷ್ಟು ಬೇರೆಲ್ಲೂ ಬರಲಿಲ್ಲ. ಧರ್ಮಮಾರ್ಗಗಳು ಇಲ್ಲಿ ನಂತೆ ಜೀವಂತವಾಗಿ ಎಲ್ಲೂ ಕಂಡುಬರಲಿಲ್ಲ. ಸಮಾಜದಲ್ಲೂ ಇಲ್ಲಿ ನಂತೆ ಧಾರ್ಮಿಕಪ್ರವೃತ್ತಿ ಬೇರೆ ಕಡೆ ಜೀವನದ ಆಳಕ್ಕೆ ಇಳಿಯ ಲಿಲ್ಲ. ಈಚಿನ ದಿನಗಳಲ್ಲಿ ಸುದ್ದಿಮಾಧ್ಯಮಗಳು, ಅಂತರ್ಜಾಲ, ಆಧುನಿಕ ಯಂತ್ರೋಪಕರಣಗಳು ಹಾಗೂ ಜಾಗತೀಕರಣದ ಪ್ರಭಾವಗಳು ನಮ್ಮ ಸಾಂಸ್ಕೃತಿಕ, ಧಾರ್ಮಿಕ ಅಡಿಪಾಯವನ್ನೇ ಅಲುಗಾಡಿಸುವಂತೆ ಕಾಣುತ್ತಿದೆಯೆಂದು ಹಲವೆಡೆ ಆತಂಕದ ಧ್ವನಿ ಕೇಳಿಬರುತ್ತಿದೆ. ಆದರೆ ಇದು ನಿಜವಲ್ಲ. ಸಹಸ್ರಾರು ವರ್ಷ ಗಳ ಇತಿಹಾಸದಲ್ಲಿ ಇದಕ್ಕಿಂತ ನೂರಪಾಲು ಹೆಚ್ಚಿನ ಅಪಾಯಗಳು ಹಲವು ಬಾರಿ ಬಂದೊದಗಿದ್ದವು; ಒಂದಲ್ಲ ಒಂದು ರೀತಿ ನಮ್ಮ ಸಂಸ್ಕೃತಿ, ಧರ್ಮ ಅವನ್ನೆಲ್ಲ ಪಾರಾಗಿ ಬಂದಿವೆ. ಹಲವು ಬಾರಿ ದೈವೀಶಕ್ತಿಯ ಬಲದಿಂದಲೇ ನಾವು ಪಾರಾಗಿದ್ದೇವೆ ಎನ್ನುವುದೂ ನಿಜ. ಅವುಗಳಿಗೆ ಹೋಲಿಸಿದರೆ, ಈಗಿನ 'ಭಯಾನಕ ಆಧುನೀ ಕರಣ' ತೀರ ಅಲ್ಪವಾದದ್ದು, ಕ್ಷಣಿಕವಾದದ್ದು. ಮತ್ತೆ ಧಾರ್ಮಿಕ, ಸಾಂಸ್ಕೃತಿಕ ಸೆಲೆ ನೂರುಪಾಲು ಶಕ್ತಿಯಿಂದೊಡಗೂಡಿ ಹೊರ ಹೊಮ್ಮುವ ಎಲ್ಲ ಲಕ್ಷಣಗಳೂ ಕಾಣಿಸುತ್ತಿವೆ.

## ಜೀವನ ಮತ್ತು ತತ್ತ್ವ

ಈ ಎಲ್ಲ ಆಧ್ಯಾತ್ಮಿಕ ಪ್ರಭಾವಗಳು ಜನಸಾಮಾನ್ಯರ ದೈನಂದಿನ ಜೀವನವನ್ನು ಗಾಢವಾಗಿ ತಟ್ಟಿವೆ. ಪ್ರಾತಃಕಾಲದಿಂದ ಆರಂಭಿಸಿ, ರಾತ್ರಿಹೊತ್ತು ನಿದ್ರಿಸುವವರೆಗೂ ಭಗವಂತನನ್ನು ಸ್ಮರಿಸುವ ಹಲವು ಸಂದರ್ಭಗಳು ನಮ್ಮ ಜೀವನದ ದಿನಚರಿಯಾಗಿಬಿಟ್ಟಿವೆ. ಎದ್ದ ಕೂಡಲೇ 'ಪ್ರಭಾತೇ ಕರದರ್ಶನಂ' ಮಾಡುವ ಪದ್ಧತಿ, ಸ್ನಾನ ಮಾಡಿ ತುಳಸೀಕಟ್ಟೆಗೆ ನೀರೆರೆಯುತ್ತ ಸ್ತೋತ್ರಗಳನ್ನು ಹೇಳುವ ಮಹಿಳೆಯರು, ಮನೆಯ ಅಂಗಳ ಗುಡಿಸಿ, ಸಾರಿಸಿ ರಂಗೋಲಿ ಹಾಕುವ ಹಳ್ಳಿಯ ಜನಜೀವನ, ಗದ್ದೆಯಲ್ಲಿ ಎತ್ತುಕಟ್ಟಿ ಉಳುವಾಗ ಉತ್ತಮ ಬೆಳೆ ನೀಡೆಂದು ದೇವರನ್ನು ಬೇಡುವ ರೈತ — ಇಲ್ಲೆಲ್ಲ ದೈವೀಪ್ರೇರಣೆ ಕಂಡುಬರುವುದಿಲ್ಲವೆ? ಹೊತ್ತುಹೊತ್ತಿಗೂ 'ಶಿವಾ' ಎನ್ನುವವರೂ, 'ಅಯ್ಯೋ ದೇವರೇ' ಎನ್ನುವವರೂ. ಆಯಾಸ ವಾದಾಗ ಮೈಯೊರಗಿಸಿ 'ರಾಮ, ಕೃಷ್ಣ' ಎನ್ನುವವರೂ, ಭಗ ವಂತನ ನಾಮಸ್ಮರಣೆ ಮಾಡಿದಂತಲ್ಲವೆ?

ಸಕಾಲದಲ್ಲೇ ಮನದಲ್ಲಿ ಮೂಡಿಬರುವ ಪ್ರಶ್ನೆ: ಹೌದು, ಅಂಥ ಮನೆಗಳು ಈಗೆಲ್ಲಿವೆ? ಹಳ್ಳಿಹಳ್ಳಿಗೂ ಕೇಬಲ್ ಟಿ.ವಿ, ಸ್ಮಾರ್ಟ್‌ಫೋನ್, ಸಿನಿಮಾ ಥಿಯೇಟರ್ ಲಗ್ಗೆಯಿಟ್ಟಿವೆ; ಬೀದಿ ಬೀದಿಯಲ್ಲೂ ಹೆಂಡದಂಗಡಿ ರಾರಾಜಿಸುತ್ತಿವೆ. ರಾಜಕೀಯದ ಕೊಳೆ, ಕೊಚ್ಚೆ ಮನೆಮನೆಗಳನ್ನೇ ಕಲುಷಿತಗೊಳಿಸಿವೆ. ಇದೇ ಇಂದಿನ ಭಾರತ; ಇಲ್ಲೆಲ್ಲ ಧರ್ಮ-ಸಂಸ್ಕೃತಿಯಲ್ಲಿ ಹುಡುಕಿದರೆ ಅದೆಲ್ಲಿ ಸಿಗುವುದು?

ನಿಜ, ಜಗತ್ತು ಬದಲಾಗುತ್ತಿದೆ. ನಮ್ಮದಲ್ಲದ ಬದುಕನ್ನು ನಾವು ಆವಾಹಿಸುವಂತೆ ಕಂಡುಬರುತ್ತಿದೆ. ಆದರೆ ಇದು ಬರೀ ಮೇಲ್ನೋಟಕ್ಕೆ ಅಷ್ಟೇ. ಅಮೆರಿಕಾ ಕಂಪನಿಯೊಂದರಲ್ಲಿ ದುಡಿ ಯುವ, ಲಕ್ಷಾಂತರ ಸಂಪಾದಿಸುತ್ತ ಸಂಪೂರ್ಣ ಪಾಶ್ಚಾತ್ಯ ಜೀವನ ಶೈಲಿಯನ್ನೇ ಅನುಸರಿಸುವ, ಆಧುನಿಕ ವೈಭವದ ಜೀವನದಲ್ಲಿ ಮುಳುಗಿರುವ ವ್ಯಕ್ತಿಗೂ ಒಮ್ಮೊಮ್ಮೆ ಒಳಗಿನ ಧ್ವನಿ ಕಾಡುತ್ತದೆ; 'ಇದು ನನ್ನ ಜೀವನವೆ? ನನ್ನ ಭಾರತೀಯ ಜೀವನ ಇನ್ನಲ್ಲೋ ಕಳೆದುಹೋಯಿತಲ್ಲ!'— ಇದು ಕೇವಲ ಆರಂಭವಷ್ಟೇ. ಮತ್ತೆ ತನ್ನ ನಿಜವಾದ ತಾಯಿಬೇರನ್ನು ಕಂಡುಕೊಂಡಲ್ಲದೆ ಈ 'ಒಳಗಿನ ಧ್ವನಿ ' ವಿರಮಿಸುವುದಿಲ್ಲ. ನಮ್ಮ ಧಾರ್ಮಿಕ, ಸಾಂಸ್ಕೃತಿಕ ಮೌಲ್ಯ ಗಳ ಶಕ್ತಿ ಈ ಬಗೆಯದು. ವ್ಯಾವಹಾರಿಕ ಬದುಕಿನ ಏರುಪೇರು ಗಳಿಂದ ಸ್ವಲ್ಪವೂ ಬದಲಾಗದ, ನಮ್ಮ ಸಮಾಜದ ಜೀವನಾಡಿ ಯಾಗಿರುವ ಆಧ್ಯಾತ್ಮಿಕ ಪ್ರವೃತ್ತಿ ವ್ಯಾಪಕವಾಗುತ್ತಾ ಹೋಗು ತ್ತದೆ; ಹೀಗೆ ವ್ಯಾಪಿಸುವುದೇ ಅದರ ಸ್ವಭಾವ.

ಅರಿವಿಲ್ಲದೆ ಹಲವು ಜಾಗತಿಕ ಬದಲಾವಣೆಗಳ ತೆಕ್ಕೆಯಲ್ಲಿ ಮುಳುಗೇಳುವವರ ಬದುಕು, ಅದಕ್ಕೆ ಅನುಸಾರವಾಗಿ ಏಳು-ಬೀಳುಗಳನ್ನು ಕಾಣುವುದು ಅನಿವಾರ್ಯ. ಅಂತೆಯೇ, ಆಧು ನಿಕ ಸಂದರ್ಭದಲ್ಲಿ ಸಂಪತ್ತು, ವೈಭವ, ತಂತ್ರಜ್ಞಾನಗಳ ಬೆನ್ನುಹತ್ತಿ ಹೋಗುವ ನಮ್ಮ ಜನ ಪರಂಪರೆಯ ಮೌಲ್ಯಗಳನ್ನು ಕಡೆಗಣಿಸಿ ದಾಗಲೂ ಇಂಥ ಅನಾಹುತಗಳಾಗುತ್ತವೆ. ಈಗಲೇ ಅದರ ಪರಿ ಣಾಮ ನಗರಜೀವನದಲ್ಲಿ ಆಗುತ್ತಿರುವುದನ್ನು ನಾವು ಗಮನಿಸು ತ್ತೇವೆ. ಆದರೆ ಇಂಥ ಬದಲಾಗುವ ಸಮಯದಲ್ಲೇ ಒಂದು ಧ್ವನಿ ನಿರಂತರ ಉಲಿಯುತ್ತಿದೆ: ''ಇಲ್ಲ, ನಮ್ಮ ಜೀವನ ಇದಲ್ಲ. ಸನಾ ತನ ತತ್ತ್ವ, ಧರ್ಮಗಳತ್ತ ಮರಳುವುದೇ ನಮ್ಮ ಧರ್ಮ.'' ಪ್ರಜ್ಞಾಪೂರ್ವಕವಾಗಿ ಈ ಧ್ವನಿಗೆ ಓಗೊಟ್ಟವರು ಎಂಥ ಆಧುನಿ ಕತೆಯಲ್ಲಿರಲಿ, ಪ್ರಪಂಚದ ಯಾವ ಮೂಲೆಯಲ್ಲೇ ಇರಲಿ, ನಮ್ಮ ತಾಯಿಬೇರನ್ನು ಎಂದಿಗೂ ಮರೆಯುವುದಿಲ್ಲ. ಎಲ್ಲ ಏಳು, ಬೀಳುಗಳ ನಡುವೆ ನಮ್ಮ ಸಾಂಸ್ಕೃತಿಕ ಜೀವನವನ್ನು ಇನ್ನಷ್ಟು ಬಲ ಪಡಿಸುವ ಮಂದಿ ಇವರು. *(ಮುಂದಿನ ಸಂಚಿಕೆಗೆ)*